# ಸಾರಥಿ-4 ತಂತ್ರಾಂಶದ ಮೂಲಕ ಆನ್ ಲೈನ್ ನೂತನ ಚಾಲನಾ ಅನುಜ್ಞಾ ಪತ್ರಕ್ಕೆ(Driving License) ಅರ್ಜಿಸಲ್ಲಿಸುವವಿಧಾನ

1. https://parivahan.gov.in ವೆಬ್ ಸೈಟ್ ಗೆ ಭೇಟಿ ನೀಡಿ "Online Services" ಆಯ್ಕೆ ಮಾಡಿ ಅದರಲ್ಲಿ "Driving License Related Services" ಅನ್ನು ಆಯ್ಕೆ ಮಾಡಿ,




2. ನಂತರ ಮುಂದಿನಪುಟದಲ್ಲಿ"Karnataka" ರಾಜ್ಯವನ್ನು ಆಯ್ಕೆ ಮಾಡಿ.



3. ನಂತರ "Apply Online" ಅನ್ನು ಆಯ್ಕೆ ಮಾಡಿ, ಅದರಲ್ಲಿ "New Driving License" ಅನ್ನು ಆಯ್ಕೆ ಮಾಡಿ.




4. "New Driving License" ಆಯ್ಕೆ ಮಾಡಿದ ನಂತರ, ಆನ್ ಲೈನ್ ಅರ್ಜಿಯಲ್ಲಿ ವಿವರ ಭರ್ತಿ ಮಾಡಿ ಸ್ವೀಕೃತಿಯನ್ನು ಮುದ್ರಿಸಿ.

5. ನಂತರ ಇಂಟರ್‌ನೆಟ್ ಬ್ಯಾಂಕ್ ಸೌಲಭ್ಯ ಹೊಂದಿದಲ್ಲಿ "Payment of fee" ಆಯ್ಕೆ ಮಾಡಿ ಆನ್ ಲೈನ್ ಮೂಲಕ ಶುಲ್ಕ ಪಾವತಿಸಿ, ರಸೀತಿ ಮುದ್ರಿಸಿಕೊಳ್ಳುವುದು, ಆನ್ ಲೈನ್ ಶುಲ್ಕ ಪಾವತಿ ಸೌಲಭ್ಯ ಹೊಂದಿಲ್ಲದಿದ್ದಲ್ಲಿ, ಕಛೇರಿ ನಗದು ಶಾಖೆಯಲ್ಲಿ ಶುಲ್ಕ ಪಾವತಿಸಬಹುದು..

6. ಅನಂತರ "DL Test Slot Booking" ಪುಟದಲ್ಲಿ ಚಾಲನಾ ಅನುಜ್ಞಾ ಪತ್ರ ಪರೀಕ್ಷೆಗಾಗಿ ದಿನಾಂಕ ಮತ್ತು ವೇಳೆಯನ್ನು ನಿಗದಿಪಡಿಸಿಕೊಳ್ಳುವುದು .

7. ನಂತರ ಗೊತ್ತುಪಡಿಸಿದ ದಿನಾಂಕದಂದು ಪ್ರಾದೇಶಿಕಸಾರಿಗೆ ಕಛೇರಿಯಲ್ಲಿ ಭೇಟಿ ನೀಡಿ ಮುದ್ರಿಸಿದ ಸ್ವೀಕೃತಿಪತ್ರ ಹಾಗೂ ಆನ್ ಲೈನ್ ಶುಲ್ಕ ರಸೀತಿ(ಆನ್ ಲೈನ್ ಪಾವತಿಸಿದ್ದಲ್ಲಿ) ಹಾಜರುಪಡಿಸಬೇಕು ಆನ್‌ಲೈನ್‌ಶುಲ್ಕಪಾವತಿಸೌಲಭ್ಯಹೊಂದಿಲ್ಲದಿದ್ದಲ್ಲಿಕಛೇರಿಯನಗದುಶಾಖೆಯಲ್ಲಿಶುಲ್ಕಪಾವತಿಸಿ ರಸೀತಿ ಹಾಜರುಪಡಿಸಬೇಕು ಯಾವುದೇ ಮುದ್ರಿತ /ಭೌತಿಕ ಅರ್ಜಿಯನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ

8. ಅಭ್ಯರ್ಥಿಯು ಸಂಬಂಧಪಟ್ಟ ಚಾಲನಾ ಪ್ರಾಧಿಕಾರದ ಮುಂದೆ ಚಾಲನಾ ಅನುಜ್ಞಾ ಪತ್ರ ಪರೀಕ್ಷೆಗೆ ಕೆಳಕಂಡ ದಾಖಲೆ ಮತ್ತು ವಾಹನದೊಂದಿಗೆ ಹಾಜರಾಗಬೇಕು.
(i) ಕಲಿಕಾ ಚಾಲನಾ ಅನುಜ್ಞಾ ಪತ್ರ
(ii) ವಾಹನ ನೋಂದಣಿ ಪ್ರಮಾಣಪತ್ರದ ಪ್ರತಿ
(iii) ವಾಯಿದೆ ಇರುವ ವಾಹನ ವಿಮೆ ಪ್ರಮಾಣಪತ್ರ
(iv) ವಾಯಿದೆ ಇರುವ ವಾಯುಮಾಲಿನ್ಯ ನಿಯಂತ್ರಣದಲ್ಲಿದೆ ಪ್ರಮಾಣಪತ್ರ.

9. ಅಧಿಕಾರಿಗಳು ವಿವರಗಳನ್ನು ಪರಿಶೀಲಿಸಿದ ನಂತರ ವಾಹನ ಚಾಲನಾ ಪರೀಕ್ಷೆಗೆ ಹಾಜರಾಗಬೇಕು.

**ಸೂಚನೆ:**

1. ವೆಬ್ ಸೈಟ್ ನಲ್ಲಿ ಸಂಬಂಧಿಸಿದ ಪುಟಗಳಲ್ಲಿ ಪ್ರದರ್ಶಿಸಿರುವಂತೆ ಸೂಚನೆಗಳನ್ನುಅನುಸರಿಸಬೇಕು .
2. ಹೆಚ್ಚಿನ ವಿವರಗಳಿಗೆ ಸಂಬಂಧಪಟ್ಟ ಪ್ರಾದೇಶಿಕಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸುವುದು .